ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 2, Sep-Oct 2022, Pp. 19-27.**
**©*IIMRD*, Mysuru**
IIMRD JOURNALS

**www.iimrd.com**

# ಅಶ್ವತ್ಥಾಮನ್ ಮತ್ತು ಬದುಕಿನ ಮೌಲ್ಯಗಳು

**ಶಿವಕುಮಾರ್ ಜೆ* ಮತ್ತು ಡಾ. ಬಿ. ಪ್ರಭುಸ್ವಾಮಿ****

*ಸಂಶೋಧನಾರ್ಥಿ; **ಸಹಾಯಕ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ, ಜೆಎಸ್‌ಎಸ್ ಕಲಾ,
ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು

***ಸಾರಾಂಶ:* (Abstract)**

*ಸಮಾಜ ಎಂದಾಗ ಅದಕ್ಕೆ ತನ್ನದೇ ಆದ ನೀತಿ ನಿಯಮಗಳಿರುತ್ತವೆ. ಆ ಸಾಮಾಜಿಕ ವ್ಯವಸ್ಥೆಯೊಳಗೆ ಬದುಕುವ ಮನುಷ್ಯ ಆ ನೀತಿ ನಿಯಮಗಳಿಗೆ ತಕ್ಕಂತೆ ನಡೆಯಬೇಕಾಗುತ್ತದೆ. ಆದರೆ ಅದೇ ವೇಳೆಗೆ ವ್ಯಕ್ತಿ ತನ್ನೊಳಗಿನ ಎಲ್ಲಾ ಭಾವನೆಗಳಿಗೆ ಮೂರ್ತರೂಪ ಕೊಡಲು ಮುಂದಾದರೆ ಆತನೊಳಗೆ ಘರ್ಷಣೆ ಪ್ರಾರಂಭವಾಗುತ್ತದೆ. ಅತಿಯಾಗಿ ತನ್ನತನಕ್ಕೆ ಬೆಲೆಕೊಟ್ಟಾಗ ಅದು ಆ ಸಾಮಾಜಿಕ ವ್ಯವಸ್ಥೆಗೆ ಮಾರಕವಾಗಬಹುದು. ತನ್ನ ನಡೆ ಸರಿಯಿಲ್ಲವೆನಿಸಿದಾಗ ಅಥವಾ ಯಾವುದಾದರೂ ದುರಂತಕ್ಕೆ ಆ ವ್ಯಕ್ತಿ ಒಳಗಾದಾಗ ಆತನೊಳಗೆ ಅವಲೋಕನ ಶುರುವಾಗುತ್ತದೆ. ಜೋಗಿಯವರ ಅಶ್ವತ್ಥಾಮನ್ ಇಂತಹ ಘರ್ಷಣೆ ಮತ್ತು ಅವಲೋಕನಗಳ ನಡುವೆ ನಡೆಯುತ್ತಾನೆ..*

***ಮುಖ್ಯಪದಗಳು* (Keywords):** *ಅಶ್ವತ್ಥಾಮನ್, ಜೋಗಿ, ಶಿವ–ಶಕ್ತಿ, ಪ್ರಕೃತಿ–ಪುರುಷ, ಶುಭಾಂಗಿನಿ, ಸಂಸ್ಕೃತಿ, ಸಿನಿಮಾ, ಬದುಕು, ಕಾದಂಬರಿ.*

**ಪೀಠಿಕೆ**

ಜೋಗಿ ಎಂದೇ ಹೆಸರಾಗಿರುವ ಗಿರೀಶ್‌ರಾವ್ ಹತ್ವಾರ್‌ರವರು ಕಥೆ, ಕಾದಂಬರಿ, ಅಂಕಣ ಸಾಹಿತ್ಯ, ವಿಮರ್ಶೆ ಮತ್ತು ನಾಟಕ ರಚನೆಯ ಮೂಲಕ ಕನ್ನಡ ಸಾಹಿತ್ಯದಲ್ಲಿ ಹೆಸರುವಾಸಿಯಾಗಿದ್ದಾರೆ. ಅಂಕಣಕಾರರಾಗಿ ಬರವಣಿಗೆ ಆರಂಭಿಸಿದ ಇವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಗೈದಿದ್ದರೂ ಕಾದಂಬರಿ ಕ್ಷೇತ್ರದಲ್ಲಿ ಅನೇಕ ಅತ್ಯುತ್ತಮ ಕೃತಿಗಳನ್ನು ನೀಡಿದ್ದಾರೆ. ಜೋಗಿಯವರು ಮುಖ್ಯವಾಗಿ ಆಧುನಿಕ ಜೀವನ ಶೈಲಿಯನ್ನು ಕೇಂದ್ರವಾಗಿರಿಸಿ ಮನುಷ್ಯ ಜೀವನದ ವಿವಿಧ ಬಗೆಯ ತಲ್ಲಣಗಳನ್ನು ವಸ್ತುವಾಗಿಟ್ಟುಕೊಂಡು ತಮ್ಮ ಬರವಣಿಗೆಯನ್ನು ನಡೆಸುತ್ತಿದ್ದಾರೆ.

'ನದಿಯ ನೆನಪಿನ ಹಂಗು' ಕಾದಂಬರಿಯ ಮೂಲಕ ಕಾದಂಬರಿ ಸಾಹಿತ್ಯ ಪ್ರಕಾರಕ್ಕೆ ಕಾಲಿಟ್ಟು ಇದುವರೆಗೆ ಸುಮಾರು 17 ಕಾದಂಬರಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಈ ಕಾದಂಬರಿಗಳಲ್ಲಿ ಅಶ್ವತ್ಥಾಮನ್ ಹಲವು ನೆಲೆಯಿಂದ ಪ್ರಮುಖವಾದುದಾಗಿದೆ. ಕಾದಂಬರಿಯ ಪ್ರಸ್ತಾವನೆಯಲ್ಲಿ

***Please cite this article as:*** *ಶಿವಕುಮಾರ್ ಜೆ. ಮತ್ತು ಬಿ. ಪ್ರಭುಸ್ವಾಮಿ* (2022). ಅಶ್ವತ್ಥಾಮನ್ ಮತ್ತು ಬದುಕಿನ ಮೌಲ್ಯಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ.* 19–27.

ಜೋಗಿಯವರೇ ಹೇಳುವ ***"ಮನುಷ್ಯ ಹೊರ ಜಗತ್ತಿನಲ್ಲಿ ಎಷ್ಟು ಕಷ್ಟ ಪಡುತ್ತಿರುತ್ತಾನೋ ಅದರ ಎರಡರಷ್ಟು ಹೋರಾಟ ಒಳಜಗತ್ತಿನಲ್ಲಿ ನಡೆಯುತ್ತಿರುತ್ತದೆ".*** [1] ಎಂಬ ಮಾತು ಒಟ್ಟಾರೆ ಕಾದಂಬರಿಯ ಆಶಯವನ್ನು ತಿಳಿಸುತ್ತದೆ.

2020ರಲ್ಲಿ ಬಿಡುಗಡೆಯಾಗಿರುವ ಈ ಕಾದಂಬರಿಯು ನೂರ ಅರವತ್ತು ಪುಟಗಳಲ್ಲಿ ಹರಡಿದ್ದು ಓದುಗ ವರ್ಗಕ್ಕೆ ಮಾತ್ರವಲ್ಲದೆ ಕೇಳುಗ ವರ್ಗಕ್ಕೂ ದೊರೆತಿದೆ. ವಸಿಷ್ಠ ಸಿಂಹ ಅವರ ಧ್ವನಿಯಲ್ಲಿ ಈ ಕಾದಂಬರಿ ಧ್ವನಿ ರೂಪದಲ್ಲಿ ಮೂಡಿಬಂದಿರುವುದು ಇದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. 'ಅಶ್ವತ್ಥಾಮನ್' ಕಾದಂಬರಿಯು ನಟನೊಬ್ಬನ ಬದುಕಿನ ಸುತ್ತ ನಡೆಯುತ್ತದೆ. ಅಂತೆಯೇ ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರದ ವಿವಿಧ ಆಯಾಮಗಳನ್ನು ಕಾದಂಬರಿಕಾರರು ಕಟ್ಟಿಕೊಟ್ಟಿದ್ದಾರೆ. ಕಾದಂಬರಿಯನ್ನು ಓದಿದಾಗ ಜೋಗಿಯವರಿಗೆ ಈ ಕ್ಷೇತ್ರದ ಬಗ್ಗೆ ಇರುವ ಸ್ವಾನುಭವವು ಇದರ ವಸ್ತುವಿಗೆ ಹಿನ್ನೆಲೆ ಒದಗಿಸಿದೆ ಎಂದು ಭಾವಿಸಿದರೆ ತಪ್ಪೇನೂ ಆಗಲಾರದು. ***"ಬಗೆ ಬಗೆಯ ಅಮಾನವೀಯ ಸಂಗತಿಗಳ ನಡುವೆ ಬದುಕಿರುವ ಸಾಹಿತಿ, ತಾನು ಸಹ ಅದೇ ಕ್ರೂರಯಂತ್ರದ ಪುಟ್ಟ ಭಾಗವಾಗಿರುವುದನ್ನು ಗುರುತಿಸಿಕೊಳ್ಳದಿದ್ದರೆ ಹೇಗೆ?"*** [2] ಆ ಹಿನ್ನೆಲೆಯಲ್ಲಿ ಜೋಗಿಯವರು ಬೆಂಗಳೂರಿನಂತಹ ಪರಿಸರದಲ್ಲಿ ಇದ್ದುಕೊಂಡು ಅಲ್ಲಿನ ಬದುಕಿನ ತಲ್ಲಣಗಳನ್ನು ವಿವಿಧ ಕಥಾವಸ್ತುಗಳ ಮೂಲಕ ಅಭಿವ್ಯಕ್ತಿಸುತ್ತಾರೆ. ಅವರೂ ಕೂಡ ಆ ಪರಿಸರದ ಭಾಗವಾಗಿರುವುದು ಕಥೆಗಳು ಸಾಧ್ಯವಾದಷ್ಟು ವಾಸ್ತವಿಕತೆಯ ನೆಲೆಘಟ್ಟಿನಲ್ಲಿ ನಡೆಯಲು ಸಹಕಾರಿಯಾಗಿದೆ.

ಈ ಕಾದಂಬರಿಯ ನಾಯಕ ಅಶ್ವತ್ಥಾಮ. ಆತನ ಸುತ್ತ ಇಡೀ ಕಾದಂಬರಿ ಒಂದರ್ಥದಲ್ಲಿ 'ಅಶ್ವತ್ಥಾಮನ್' ಎಂಬುವವನ ಜೀವನ ಚರಿತ್ರೆಯನ್ನು ಕಟ್ಟಿಕೊಡುವಂತೆ ಕಾದಂಬರಿ ರಚನೆಗೊಂಡಿದೆ. ಅಂದರೆ ಅಶ್ವತ್ಥಾಮನ ಬಾಲ್ಯ, ಜೀವನ, ಅವನ ತಂದೆ ತಾಯಿಯ ಪರಿಚಯ, ಅವನು ಜೀವನವನ್ನು ಕಟ್ಟಿಕೊಂಡ ವಿಧಾನ ಈ ಮೊದಲಾದ ಘಟನೆಗಳನ್ನು ಕಾದಂಬರಿ ನಿರೂಪಿಸುತ್ತಾ ಹೋಗುತ್ತದೆ. ಆದರೆ ಕಾದಂಬರಿಯ ಕೇಂದ್ರ ಬಿಂದು ಆತನ ಯೌವ್ವನದ ಬದುಕಿಗೆ ಸಂಬಂಧಿಸಿದ್ದಾಗಿದೆ. ಆತನ ಯೌವ್ವನದ ಎರಡು ವಲಯದ ಬದುಕನ್ನು ಕಾದಂಬರಿಕಾರರು ಚಿತ್ರಿಸಿದ್ದಾರೆ. ಅಶ್ವತ್ಥಾಮನು ಓರ್ವ ನಟನಾಗಿ ಸಮಾಜದಲ್ಲಿ ಜನ ಮನ್ನಣೆ ಗಳಿಸಿದ್ದಾತ. ಒಂದರ್ಥದಲ್ಲಿ ನಟನೆಯೇ ಆತನ ಬದುಕಾಗಿತ್ತು. ಇನ್ನೂ ಆತನ ವೈಯಕ್ತಿಕ ಜೀವನದ ವಲಯಕ್ಕೆ ಬಂದರೆ ಅಷ್ಟೇನು ತೃಪ್ತಿದಾಯಕವಲ್ಲದ ಬದುಕು ಆತನದು. ಒಬ್ಬರ ಮೇಲೊಬ್ಬರಂತೆ ಮೂವರು ಹೆಂಡತಿಯರು, ಮೊದಲ ಹೆಂಡತಿ ಶುಭಾಂಗಿನಿ ಈತನ ನಟನ ಬದುಕಿಗೆ ಆಸರೆಯಾಗಿ ನಿಂತಿರುತ್ತಾಳೆ. ಆದರೆ ಕೌಟುಂಬಿಕ ವಿಷಯದಲ್ಲಿ ಈತನ ಬೇಜವಾಬ್ದಾರಿತನದಿಂದ ಆಕೆ ದೂರಾಗುತ್ತಾಳೆ. ನಂತರ ಬಂದ ಸರೋಜಿನಿ ಸಂಯುಕ್ತಾಳ ಬದುಕು ಇದಕ್ಕಿಂತ ಬೇರೆ ಆಗಿರುವುದಿಲ್ಲ.

ಓರ್ವ ಉತ್ತಮ ನಟನಾಗಿ ಗುರುತಿಸಿಕೊಂಡರೂ ಸಾಂಸಾರಿಕ ಜೀವನದಲ್ಲಿ ಆತನದು ತೃಪ್ತವಲ್ಲದ ಬದುಕು. ಇದಕ್ಕೆ ಸಂಬಂಧ ಪಟ್ಟಂತೆ ಇಡೀ ಕಾದಂಬರಿ ಅಶ್ವತ್ಥಾಮನ ಮನೋ ವಲಯದ ಸುತ್ತ ಜರುಗುತ್ತಾ ಹೋಗುತ್ತದೆ. ಅಶ್ವತ್ಥಾಮನದು ಒಂದು ರೀತಿಯಲ್ಲಿ ವಿಚಿತ್ರವಾದ ಬದುಕು. ತನ್ನ ಮನೋಭಾವನೆಗಳನ್ನು ಹಂಚಿಕೊಂಡು ಭಾರವನ್ನು ಕಡಿಮೆ ಮಾಡಿಕೊಳ್ಳಲು ಬಯಸುವನಾದರೂ ಕೆಲವೊಮ್ಮೆ ಆ ಭಾರಕ್ಕೆ ಆತನೇ ಕಾರಣನಾಗಿರುತ್ತಾನೆ. ಕಾದಂಬರಿಕಾರರು ಇದನ್ನೇ ಕಾದಂಬರಿಯ ತಂತ್ರವಾಗಿಯು ಬಳಸಿಕೊಂಡಿರುವುದು ವಿಶೇಷ.

ಅಶ್ವತ್ಥಾಮನ್ ತನ್ನ ಕಟ್ಟಕಡೆಯ ದಿನಗಳಲ್ಲಿ ಮನೋವ್ಯಾಧಿ ಮತ್ತು ಮನೋಭಾರದಿಂದ ನರಳುತಿರುತ್ತಾನೆ. ತನ್ನ ಮನದ ದುಗುಡವನ್ನು ಯಾರ ಬಳಿಯಲ್ಲಿಯಾದರು ಹೇಳಿಕೊಳ್ಳಬೇಕೆಂಬುದು ಆತನ ಬಯಕೆ. ಇಂತಹ ಸಂದರ್ಭದಲ್ಲಿಯೇ ಆತನ ಸ್ನೇಹಿತ ರಾಜೇಂದ್ರನು ನಿರೂಪಕನನ್ನು ಆತನಲ್ಲಿಗೆ ಕರೆದುಕೊಂಡು ಬಂದು ಪರಿಚಯಿಸುತ್ತಾನೆ. ಅಶ್ವತ್ಥಾಮ ನಿರೂಪಕನೊಂದಿಗೆ ತನ್ನ ಕಥೆಯನ್ನು ನಿರೂಪಿಸುವುದರೊಂದಿಗೆ ಕಾದಂಬರಿ ತೆರದುಕೊಳ್ಳುತ್ತದೆ.

ರಾಜೇಂದ್ರ, ಅಶ್ವತ್ಥಾಮ, ನಿರೂಪಕ ಈ ಮೂವರು ಆತ್ಮೀಯ ಸ್ನೇಹಿತರು. ಅಶ್ವತ್ಥಾಮನಿಗೆ ಆರೋಗ್ಯ ವ್ಯತ್ಯಾಸವಾದಾಗ ಆತ ಉಳಿದುಕೊಳ್ಳುವುದು ರಾಜೇಂದ್ರನ ಮನೆಯಲ್ಲಿಯೆ. ಅಶ್ವತ್ಥಾಮನು ತನ್ನ ಜೀವನದಲ್ಲಿ ನಡೆದ ಎಲ್ಲ ಘಟನೆಗಳನ್ನು ಮನದಲ್ಲಿಯೇ ಅದುಮಿಟ್ಟುಕೊಂಡು ಕೊರಗುತ್ತಿರುತ್ತಾನೆ. ರಾಜೇಂದ್ರನ ಮೂಲಕ ಮತ್ತೋರ್ವ ಸ್ನೇಹಿತನಾದ ನಿರೂಪಕನನ್ನು ಮನೆಗೆ ಕರೆಸಿಕೊಂಡು ತನ್ನ ಮನದಾಳದ ನೋವುಗಳನ್ನು ತೋಡಿಕೊಳ್ಳುತ್ತಾ ತನ್ನ ಕಥೆಯನ್ನು ಹೇಳುತ್ತಾನೆ. ***"ನಾನು ನಿನ್ನ ಕರೆಸಿದ್ದು ಯಾಕೆ ಗೊತ್ತಾ? ಈ ನರಕದಿಂದ ಹೊರಬರೋದಕ್ಕೆ ಎಷ್ಟೇ ಪ್ರಯತ್ನ ಪಟ್ರೂ ಒಂದು ತಿಂಗಳಾದ್ರು ಬೇಕೆ ಬೇಕು, ಅಷ್ಟು ದಿನ ನಾನು ಮತ್ತೊಂದು ಜೀವನ ಬದುಕ್ತಾ ಇರ್‍ತೀನಿ"*** ಈ ಮಾತುಗಳು ಆತನ ಘಾಸಿಗೊಂಡ ಮನಸ್ಥಿತಿಯನ್ನು ತಿಳಿಸುತ್ತವೆ. ತನ್ನ ಮನವನ್ನು ಘಾಸಿಗೊಳಿಸುತ್ತಿರುವ ಘಟನೆಗಳನ್ನು ಹೇಳಿಕೊಳ್ಳಬೇಕು. ಭಾವಶುದ್ಧಿಗೊಳ್ಳಬೇಕು ಎಂದು ನಿಶ್ಚಯಿಸಿದ ಅಶ್ವತ್ಥಾಮ, ಕಾದಂಬರಿಯಲ್ಲಿ ತನ್ನನ್ನು ತೆರೆದುಕೊಳ್ಳಲು ಮುಂದಾಗುತ್ತಾನೆ. ಅಶ್ವತ್ಥಾಮನ ಮನದ ತಲ್ಲಣಗಳನ್ನು ಪ್ರಸ್ತುತ ಪಡಿಸುತ್ತಾ ಓದುಗನ ವಿಶ್ಲೇಷಣೆಗೆ ಆತನನ್ನು ಒಳಗುಮಾಡಿಸುವುದು ಕಾದಂಬರಿಕಾರನ ಮುಖ್ಯ ಉದ್ದೇಶವಾಗಿದೆ.

ಪ್ರತಿಯೊಬ್ಬ ಮನುಷ್ಯನಿಗೂ ಬಾಲ್ಯದ ಬದುಕು ಬಹಳ ಮುಖ್ಯವಾದುದು. ಅವನ ಬಾಲ್ಯ ಜೀವನದಲ್ಲಿ ಇದ್ದಂತಹ ವಾತಾವರಣ, ಆ ಸಂದರ್ಭದಲ್ಲಿನ ಆತನ ಕಲಿಕೆ, ಅವನು ನೋಡುವ, ಅನುಭವಿಸುವ ಸಾಮಾಜಿಕ ವ್ಯವಸ್ಥೆ ಇವುಗಳೆಲ್ಲವೂ ಅವನ ಮುಂದಿನ ಜೀವನದ ಮೇಲೆ ಪ್ರಭಾವ ಬೀರುತ್ತವೆ. ಅಂದರೆ ಬಾಲ್ಯದ ಬದುಕು ಪ್ರತಿಯೋರ್ವನ ಜೀವನದಲ್ಲಿಯೂ ಮಹತ್ತರವಾದುದು. ಕಾದಂಬರಿಕಾರರು ಅಶ್ವತ್ಥಾಮನ ಬಾಲ್ಯದ ಬದುಕನ್ನು ಈ ನೆಲೆಯಲ್ಲಿ ಚಿತ್ರಿಸುತ್ತಾ ಹೋಗುತ್ತಾರೆ. ಅಶ್ವತ್ಥಾಮನ್ ತಂದೆ ಓರ್ವ ಕುಡುಕ, ತಾಯಿ ಅವನು ಹೇಳಿದ ಹಾಗೆ ಕೇಳುವ ಒಬ್ಬ ಕೆಲಸಗಾರ್ತಿ, ಅಶ್ವತ್ಥಾಮ ಹುಟ್ಟಿದ್ದು ಬಲತ್ಕಾರದಿಂದ. ಹೀಗೆ ಅಶ್ವತ್ಥಾಮನ ಜನನವೇ ಒಂದು ದುರಂತವೆಂದರೆ ತಪ್ಪಾಗಲಾರದು.

ಬದುಕು ಮತ್ತು ನಟನೆ ಹೇಗೆ ಅಶ್ವತ್ಥಾಮನಿಗೆ ಕುತೂಹಲಕಾರಿ ಅಂಶಗಳೋ ಹಾಗೆಯೇ ಆತನಿಗೆ ಹೆಣ್ಣು ಕೂಡ ಒಂದು ಕುತೂಹಲಕಾರಿ ಅಂಶವಾಗಿಯೇ ಕಂಡು ಬರುತ್ತದೆ. ಒಂದೆಡೆ ಹೆಣ್ಣಿಗೆ ಸ್ವಾತಂತ್ರ್ಯ ಬಯಸುವವನಂತೆ ಕಂಡು ಬರುತ್ತಾನಾದರೂ ಮತ್ತೊಂದೆಡೆ ಹೆಣ್ಣನ್ನು ಆತ ಭೋಗದ ವಸ್ತುವಾಗಿ ಬಳಸಿಕೊಂಡಂತೆ ಭಾಸವಾಗುತ್ತಾ ಹೋಗುತ್ತದೆ. ಆದರೆ ಆತನ ದೃಷ್ಟಿಯಲ್ಲಿ ಅದು ಹೆಣ್ಣಿಗೆ ಕೊಡುವ ಸ್ವಾತಂತ್ರ್ಯವಾಗಿದೆ. ಒಂದು ಹೆಣ್ಣು ಇಷ್ಟವಿರದ ಗಂಡಿನೊಂದಿಗೆ ಬದುಕಬಾರದು. ಅವಳಿಗೆ ಇಷ್ಟವಾದ ಜೀವನವನ್ನು ಅವಳು ಕಟ್ಟಿಕೊಳ್ಳಬೇಕು ಎಂಬ ಆಲೋಚನೆ ಅಶ್ವತ್ಥಾಮನದ್ದು. ತನ್ನ ತಾಯಿಯ ಬಗೆಗೆ ಅವನು ಆಗಾಗ ಹೇಳಿಕೊಳ್ಳುವ ಮಾತು ಇದು. ಅವನು ಅವಳಿಗೆ ಇಷ್ಟವಿರದೆ ಇದ್ದಾಗ ಯಾಕೆ ಅವಳು

ಅವನನ್ನೇ ವಿವಾಹ ಆದಳು? ಏಕೆ ಅವನೊಟ್ಟಿಗೆ ಜೀವನ ನಡೆಸುತ್ತಿದ್ದಾಳೆ? ಏಕೆ ಅವನನ್ನು ತಿರಸ್ಕರಿಸಲಿಲ್ಲ? ಎಂಬ ಹಲವಾರು ಪ್ರಶ್ನೆಗಳು ಅಶ್ವತ್ಥಾಮನ ಮನದಲ್ಲಿ ಸದಾ ಕಾಡುತ್ತಲೇ ಇರುತ್ತವೆ.

ಇಂತಹ ಆಲೋಚನೆಯಿಂದಲೋ ಏನೋ ಅಶ್ವತ್ಥಾಮನ ಜೀವನದಲ್ಲಿ ಯಾವ ಹೆಣ್ಣು ಸುಳಿದರೂ ಅವರು ಶಾಶ್ವತವಾಗಿ ಆತನೊಂದಿಗೆ ಇರಲಾರದವರಾಗಿರುತ್ತಾರೆ. ಯಾವುದೋ ಒಂದು ಕಾರಣಕ್ಕೆ ದೂರವಾಗುತ್ತಾರೆ. ಅವರು ದೂರವಾದಂತೆ ಅಶ್ವತ್ಥಾಮನು ಮತ್ತೆ ಪ್ರೀತಿಯಲ್ಲಿ ಬೀಳುತ್ತಾನೆ, ಸಹಜವಾಗಿ ಕಾಮಕೇಳಿಯಲ್ಲಿ ಮೈಮರೆಯುತ್ತಾನೆ.

ಹೆಣ್ಣಿಗೆ ಸ್ವಾತಂತ್ರ್ಯ ಬಯಸುವುದರ ಜೊತೆಗೆ ತನಗೂ ಅಂದರೆ ಪುರುಷನಿಗೂ ಈ ವಿಷಯದಲ್ಲಿ ಅಂದರೆ ಪ್ರೀತಿ, ಕಾಮ, ಪ್ರೇಮ ಈ ವಿಷಯದಲ್ಲಿ ಸ್ವಾತಂತ್ರ್ಯವನ್ನು ಬಯಸುತ್ತಾನೆ. ಪ್ರೀತಿಯು ಶಾಶ್ವತವಲ್ಲ ಎಂಬುದು ಆತನ ದೃಢವಾದ ನಂಬಿಕೆಯಾದರೆ, ಪ್ರೀತಿಯಲ್ಲೂ ನಟನೆಯನ್ನು ಕಾಣುವುದು ಅವನ ವಿಶೇಷತೆಯಾಗಿದೆ. ಬಯಕೆ ಮತ್ತು ಸುಖವೇ ಅವನ ಮನದಲ್ಲಿ ಶಾಶ್ವತವಾಗಿರುತ್ತದೆ. ಈ ರೀತಿಯ ಬದುಕಿನ ಆತನ ದೃಷ್ಟಿಕೋನಕ್ಕೆ ಆತನ ಬಾಲ್ಯದ ಬದುಕೂ ಒಂದು ಕಾರಣವೆನ್ನುವುದನ್ನು ಕಾದಂಬರಿ ಧ್ವನಿಸುತ್ತದೆ.

ಅಶ್ವತ್ಥಾಮನದು ಒಂದು ರೀತಿಯಲ್ಲಿ ತರ್ಕಬದ್ಧವಾದ ಬದುಕು. ಆದರೆ ಆ ತರ್ಕವೇ ಬದುಕಲ್ಲವೆಂಬುದನ್ನು ಆತ ಗ್ರಹಿಸದೇ ತರ್ಕಬದ್ಧವಾಗಿ ಬದುಕಲು ಹೋಗಿ ಜೀವನವನ್ನು ದುರಂತಕ್ಕೆ ತೆಗೆದುಕೊಂಡು ಹೋಗುತ್ತಾನೆ. ಒಬ್ಬ ನಟನಾಗಿ ಒಂದು ಪಾತ್ರವನ್ನು ನಿರ್ವಹಿಸಿದ ಮೇಲೆ ಪುನಃ ಅದೇ ಪಾತ್ರ ಮಾಡುವ ಅವಕಾಶ ಸಿಗುವುದು ಅಪರೂಪ. ಆದರೆ ನಿಜ ಜೀವನದಲ್ಲಿ ಮತ್ತೆ ಮತ್ತೆ ಒಂದೇ ಪಾತ್ರವನ್ನು ನಾವು ಮಾಡಬೇಕು, ಒಬ್ಬನೇ ಅಪ್ಪನ ಮಗನಾಗಿರಬೇಕು, ಒಬ್ಬಳೇ ಹೆಂಡತಿಗೆ ಗಂಡನಾಗಿರಬೇಕು, ತನ್ನ ಮಕ್ಕಳಿಗೇ ಅಪ್ಪನಾಗಿರಬೇಕು. ಈ ತರ್ಕ ಅಶ್ವತ್ಥಾಮನಿಗೆ ಇಷ್ಟವಾಗುವುದಿಲ್ಲ. ಇದಕ್ಕಿಂತ ಭಿನ್ನವಾಧ ತರ್ಕ ಆತನದು.

ನಿಜ ಜೀವನದಲ್ಲಿಯೂ ಆತ ನಟನೆಯನ್ನು ಮಾಡುವ ಉದ್ದೇಶ ಹೊಂದಿದವನಾಗಿರುತ್ತಾನೆ. ಅವನ ಜೀವನದಲ್ಲಿ ಬರುವ ಎಲ್ಲ ಪಾತ್ರಗಳು ನಾಟಕದಲ್ಲಿ ಬಂದು ಹೋಗುವ ಪಾತ್ರಗಳ ರೀತಿಯೇ ಇರಬೇಕು ಎಂಬುದು ಅವನ ಮನಸ್ಥಿತಿಯಾಗಿರುತ್ತದೆ. ಒಂದು ಪಾತ್ರ ಮಾಡಿದ ಮೇಲೆ ಮತ್ತೆ ಬೇರೆ ಪಾತ್ರವನ್ನು ನಿರ್ವಹಿಸಬೇಕು. ಹಾಗೆಯೆ ಬದುಕಿನಲ್ಲಿಯೂ ಹೊಸ ಹೊಸ ವ್ಯಕ್ತಿಗಳು ಬಂದು ಹೋಗಬೇಕೆಂದು ಬಯಸುತ್ತಾನೆ. ಅದನ್ನು ಆತ ಹೆಣ್ಣಿನ ವಿಷಯದಲ್ಲಿ ಸತ್ಯ ಮಾಡಲು ಪ್ರಯತ್ನಿಸುವುದು ವಿಶೇಷ.

ಕಾದಂಬರಿಕಾರ ಆಧುನಿಕ ಜೀವನದ ತಲ್ಲಣಗಳನ್ನು ಅಶ್ವತ್ಥಾಮನ ಪಾತ್ರದ ಮೂಲಕ ಅಭಿವ್ಯಕ್ತಿಸಿದ್ದಾರೆ. ಹುಟ್ಟಿನಿಂದ ಸಾವಿನವರೆಗೂ ಜೀವನದಲ್ಲಿ ಬರುವ ಪ್ರೀತಿ, ವಿಶ್ವಾಸ, ನಂಬಿಕೆ ಮುಂತಾದ ಹಲವಾರು ಅಂಶಗಳ ನಿರೂಪಣೆ ಈ ಕಾದಂಬರಿಯಲ್ಲಿದೆ. ***"ಮನುಷ್ಯರನ್ನು ಪ್ರೀತಿಸುವುದನ್ನು ನಿಲ್ಲಿಸಿದ ತಕ್ಷಣ ಅವನು ಸಾವನ್ನು ಪ್ರೀತಿಸಲು ಶುರು ಮಾಡಿದ್ದಾನೆ ಎಂದರ್ಥ"*** ಎಂಬ ಅಶ್ವತ್ಥಾಮನ ಗ್ರಹಿಕೆ ಓದುಗನಲ್ಲಿ ಮಾನವೀಯ ಗುಣವನ್ನು ಹೆಚ್ಚಿಸುವಲ್ಲಿ ಸಹಕರಿಸುತ್ತದೆ. ದ್ವೇಷ, ಅಸೂಯೆ ಮುಂತಾದ ಕೆಟ್ಟ ಗುಣಗಳಿಂದ

ದೂರವಾಗಿ ಮಾನವ ಪ್ರೀತಿಯನ್ನು ಬೆಳೆಸಿಕೊಳ್ಳಬೇಕೆಂಬುದು ಅಶ್ವತ್ಥಾಮನ ಅಂತೆಯೇ ಕಾದಂಬರಿಕಾರನ ಮುಖ್ಯ ಆಶಯವಾಗಿದೆ.

ಈ ಮೊದಲೇ ಹೇಳಿದಂತೆ ಅಶ್ವತ್ಥಾಮನ್ ಓರ್ವ ದುರಂತ ನಾಯಕ. ಆತನು ತನ್ನ ವೈಯಕ್ತಿಕ ಜೀವನದಲ್ಲಿ ಅಂತಹ ನೆಮ್ಮದಿಯನ್ನು ಕಾಣಲಾರದವನು. ಆದರೆ ಆತನಲ್ಲಿ ಮಾನವೀಯತೆಗೆ ಕೊರತೆಯಿರಲಿಲ್ಲ. ಕಥೆಯ ನಾಯಕನಿಗೆ ಕಾದಂಬರಿಕಾರರು ಅಶ್ವತ್ಥಾಮನ್ ಎಂದು ಹೆಸರಿಟ್ಟಿರುವುದಕ್ಕೂ ಕಾರಣವಿದೆ. ಇಲ್ಲಿಯ ಅಶ್ವತ್ಥಾಮನ ಮನದ ತುಮುಲವು ಮಹಾಭಾರತದ ಅಶ್ವತ್ಥಾಮನ ಮನದ ತುಮುಲದಂತೆಯೇ ಇದೆ. ಹಲವು ವಿಷಯಗಳಲ್ಲಿ ಇಬ್ಬರಿಗೂ ಸಾಮ್ಯವಿದೆ.

ಅಶ್ವತ್ಥಾಮನಿಗೆ ಪ್ರೀತಿಸುವುದೆಂದರೆ ಬಹಳ ಇಷ್ಟ. ಅದು ಮಾನವ ಪ್ರೀತಿ ಮತ್ತು ಹೆಣ್ಣಿನ ಪ್ರೀತಿ ಎರಡೂ ನೆಲೆಯಲ್ಲಿಯೂ ಸಾಗಿದೆ. ಆದರೆ ಹೊಸ ಹೊಸ ವ್ಯಕ್ತಿಗಳನ್ನು ಪರಿಚಯಿಸಿಕೊಂಡು ಸ್ನೇಹ ಮಾಡಿಕೊಳ್ಳುವ ನೆಲೆಯೇ ಬೇರೆ, ಸಂಸಾರದ ಪ್ರೀತಿಯೇ ಬೇರೆ. ಕುಟುಂಬದಲ್ಲಿ ಹೊಸಹೊಸ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಮಾಡಿಕೊಳ್ಳುತ್ತಾ ಹೋದರೆ ಬದುಕು ಹಸನಾಗುವ ಬದಲು ಹಾಳಾಗುತ್ತದೆ. ಆದರೆ ಅಶ್ವತ್ಥಾಮನ್ ತನ್ನ ವೈಯಕ್ತಿಕ ಬದುಕನ್ನು ಸಾರ್ವಜನಿಕ ಬದುಕಂತೆ ಮಾಡಿಕೊಂಡವನು.

ಅಶ್ವತ್ಥಾಮನ ಜೀವನದಲ್ಲಿ ಬಂದಂತಹ ಹೆಂಡತಿಯರು ಅವನ ಜೊತೆ ಹೆಚ್ಚು ದಿನಗಳು ಇರುತ್ತಿರಲಿಲ್ಲ, ಅಶ್ವತ್ಥಾಮನ ಮೊದಲ ಹೆಂಡತಿಯಾದ ಶುಭಾಂಗಿನಿ ಅಶ್ವತ್ಥಾಮನನ್ನು ದೊಡ್ಡ ನಟನನ್ನಾಗಿ ಮಾಡಿ ಅವನ ಜೀವನಕೊಂದು ದಾರಿ ಮಾಡಿ ಕೊಟ್ಟವಳು. ಆದರೆ ಆಕೆಯ ಜೊತೆ ಅವನು ಕೆಲವೇ ದಿನಗಳ ಕಾಲ ಮಾತ್ರ ಜೀವನ ನಡೆಸುತ್ತಾನೆ. ಅವಳಾದ ನಂತರ ಬಂದ ಸರೋಜಿನಿ, ಸಂಯುಕ್ತಾ ಇವರ ಜೊತೆಯು ತನ್ನ ದಾಂಪತ್ಯ ಜೀವನವನ್ನು ಪೂರ್ಣಗೊಳಿಸಿಲ್ಲ. ಏಕೆಂದರೆ ಅವನಿಗೆ ಪ್ರೀತಿ ಎಷ್ಟು ಮುಖ್ಯವೋ ಕಾಮವೂ ಅಷ್ಟೇ ಮುಖ್ಯ. ಮಾನವೀಯತೆ ಮನುಷ್ಯತ್ವ ಎಂದೆಲ್ಲಾ ಮಾತನಾಡುವ ಆತ ಈ ವಿಷಯ ಬಂದಾಗ ಕುಬ್ಜನಾಗುತ್ತಾನೆ. ಅಥವಾ ಆತನಿಗೆ ಅದುವೇ ಸರಿಯಾದ ಜೀವನ ಎನ್ನಿಸಿದಂತೆ ಕಾಣುತ್ತದೆ. ಆದರೆ ಒಟ್ಟು ಕಾದಂಬರಿಯನ್ನು ನೋಡಿದಾಗ ಆತರಹದ ಬದುಕಿನಿಂದ ಆತ ತುಂಬಾ ಘಾಸಿಗೊಂಡವನಾಗಿಯೂ ಮಾನಸಿಕವಾಗಿ ನೆಮ್ಮದಿ ಕಳೆದುಕೊಂಡವನಾಗಿಯೂ ಕಂಡು ಬರುತ್ತಾನೆ.

ಇಡೀ ಕಾದಂಬರಿಯನ್ನು ಅವಲೋಕಿಸಿದಾಗ ಆಧುನಿಕತೆಯ ಭರಾಟೆಯಲ್ಲಿ ಪಾಶ್ಚಾತ್ಯರ ಜೀವನ ಶೈಲಿಗೆ ಮಾರು ಹೋಗಿ ನಮ್ಮತನವನ್ನು ನಮ್ಮ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿರುವುದರ ಬಗೆಗೆ ಚಿಂತಿಸುವಂತೆ ಮಾಡುತ್ತದೆ. ***"ಬ್ರಿಟಿಷರ ಆಗಮನ ಭಾರತೀಯ ಬದುಕಿನಲ್ಲಿ ಕೇವಲ ರಾಜಕೀಯ ಆಕ್ರಮಣ ಮಾತ್ರವಾಗಿರದೆ, ಸಾಮಾಜಿಕ ರಚನೆಯ ವಿನ್ಯಾಸವನ್ನೇ ಬದಲಾಯಿಸಿತು"*** ಎಂಬುದು ಬಹಳ ಸತ್ಯವಾದುದು. ಇಂದಿಗೂ ನಾವು ಆ ಅನುಕರಣೆಯಿಂದ ಹೊರಬರಲಾರದವರಾಗಿದ್ದೇವೆ. ದಿನೇ ದಿನೇ ನಮ್ಮ ಸಂಸ್ಕೃತಿಯನ್ನು ಮರೆಯುತ್ತಾ ಪಾಶ್ಚಾತ್ಯ ಸಂಸ್ಕೃತಿಯತ್ತ ಹೆಚ್ಚು ವಾಲುತ್ತಿದ್ದೇವೆ. ಅಶ್ವತ್ಥಾಮನ್ ಕಾದಂಬರಿಯು ಒಂದರ್ಥದಲ್ಲಿ ಪಾಶ್ಚಾತ್ಯ ಬದುಕು ಮತ್ತು ನಮ್ಮ ಸಂಸ್ಕೃತಿಯ ಮನಸ್ಸಿನ ನಡುವಿನ ಸಂಘರ್ಷವನ್ನು ಹೊಂದಿದೆ. ಹೆಂಡತಿಯರಲ್ಲದೆ ರಮಣಿ, ಅಮೃತಮತಿ, ದಾತ್ರಿ, ನಳಿನಾಕ್ಷಿ ಇನ್ನಿತರೆ ಹಲವಾರು ಹೆಣ್ಣಿನ ಜೊತೆ ಅವನು ಕಾಮದಲ್ಲಿ ವ್ಯವಹರಿಸುತ್ತಾನೆ ಎಂಬ ಅಂಶವನ್ನು ಗಮನಿಸಿದಾಗ ಅಶ್ವತ್ಥಾಮನ್ ಬಗೆಗೆ ಓದುಗನಲ್ಲಿ ಅಸಹ್ಯತೆಯೊಂದು ಮೂಡುತ್ತದೆ. ಅಶ್ವತ್ಥಾಮನ್ ಮಾನವೀಯ

ಸಂಬಂಧಗಳ ವಿಷಯ ಬಂದಾಗ ನಾಯಕನಾಗುತ್ತಾನೆ. ತನ್ನದೇ ವೈಯಕ್ತಿಕ ಬದುಕು ಬಂದಾಗ ಒಮ್ಮೊಮ್ಮೆ ದುರಂತನಾಯಕನಂತೆಯೂ, ಖಳನಾಯಕನೆಂತೆಯೂ ಕಂಡು ಬರುತ್ತಾನೆ. ಈತನ ಸಂಸಾರದ ಬದುಕಿನ ಸಂದರ್ಭಗಳು ಕಾದಂಬರಿಯಲ್ಲಿ ಬಂದಾಗ ನಮ್ಮ ಸಂಸ್ಕೃತಿಯ ಸಾಂಸಾರಿಕ ಸಂಬಂಧಗಳ ಮೌಲ್ಯಗಳು ನೆನಪಿಗೆ ಬರುತ್ತವೆ.

ಅವನು ಹೆಣ್ಣಿನಲ್ಲಿ ಶೃಂಗಾರವನ್ನು ಮಾತ್ರ ಹುಡುಕುವವನಾಗಿ ಕಂಡುಬರುವನು. ಅಂತೆಯೇ ಒಂದೇ ಹೆಣ್ಣಿನಲ್ಲಿ ಶೃಂಗಾರದ ಭಾವವನ್ನು ಕೊನೆವರೆಗೂ ಆತ ನೋಡಲಾರ. ಮತ್ತೆ ಮತ್ತೆ ಬೇರೆ ಹೆಣ್ಣುಗಳ ಜೊತೆ ಸೇರಬೇಕೆಂಬ ತುಡಿತ ಅವನಿಂದ ಬಿಟ್ಟು ಹೋಗುವುದಿಲ್ಲ. ಇದಕ್ಕೆ ಅವನ ಬಾಲ್ಯವು ಕಾರಣವಾಗಿದೆ. ಅಶ್ವತ್ಥಾಮ ಹೆಣ್ಣಿನ ಜೊತೆ ತಾನು ನಡೆದುಕೊಳ್ಳುವ ಬಗೆ ಆತನಿಗೆ ಸಂತೋಷ ಸಿಕ್ಕಂತಾದರು ಕೊನೆ ಕೊನೆಯಲ್ಲಿ ಪ್ರೀತಿ, ವಿಶ್ವಾಸ, ಸಂಬಂಧಗಳ ಮಹತ್ವ ಅರಿತು ಅವುಗಳ ಬಗೆಗೆ ಚಿಂತಿಸುವವನಾಗುತ್ತಾನೆ. ಇದುವೇ ಕಾದಂಬರಿಯ ಮುಖ್ಯ ಆಶಯವಾಗಿದೆ.

ಅವನ ಪ್ರೀತಿಯ ಬಗೆ ಹೇಗೆಂದರೆ ***"ಯಾವತ್ತೂ ಪ್ರೀತಿಸುವ ಗಂಡನಿಗಿಂತ ಪ್ರೀತಿಸದ ಗಂಡನೇ ಒಳ್ಳೆಯವನು. ಗಂಡನ ಪ್ರೀತಿ ಕ್ರಮೇಣ ನಶಿಸಬಹುದು. ಆದರೆ ಪ್ರೀತಿಯಿಲ್ಲದ ಸ್ಥಿತಿಗೆ ಕೊನೆಯಿಲ್ಲ"*** ಈ ಮೇಲಿನ ಮಾತು ಅಶ್ವತ್ಥಾಮನು ಗಂಡ–ಹೆಂಡತಿ ಸಂಬಂಧದ ಬಗೆಗೆ ತಳೆದಿರುವ ನಿಲುವಾಗಿದೆ. ಮನುಷ್ಯರನ್ನು ಪ್ರೀತಿಸುವುದನ್ನು ನಿಲ್ಲಿಸಿದ ತಕ್ಷಣ ಅವನು ಸಾವನ್ನು ಪ್ರೀತಿಸಲು ಶುರುಮಾಡಿದ್ದಾನೆ ಎಂಬ ಈ ಮಾತು ಅಶ್ವತ್ಥಾಮನ ಮನದ ಮಾತೆ ಆಗಿದೆ. ಇಲ್ಲಿ ಪ್ರೀತಿಯ ಬಗೆಗೆ ಒಂದೇ ನಿಲುವು ತಳೆದಿದ್ದರೂ ಆತ ಗಂಡ–ಹೆಂಡತಿ ಸಂಬಧದ ಬಗೆಗೆ ಅತೃಪ್ತ ಭಾವ ಇರುವುದು ವ್ಯಕ್ತವಾಗಿದೆ. ಅವನಿಗೆ ಒಂದೇ ಹೆಣ್ಣಿನ ಜೊತೆ ಹೆಚ್ಚು ದಿನ ಇರಲಾರನಾದ್ದರಿಂದ ಆತನ ಮನಸ್ಸು ಸದಾ ಹೆಂಡತಿಯಿಂದ ತಪ್ಪಿಸಿಕೊಳ್ಳಲು ಏನಾದರೊಂದು ಯೋಚಿಸುತ್ತಲೇ ಇರುತ್ತದೆ.

ಭಾರತೀಯ ಪರಂಪರೆಯಲ್ಲಿ ಕೌಟುಂಬಿಕ ವ್ಯವಸ್ಥೆಯನ್ನು ಪಾವಿತ್ರ್ಯದ ನೆಲೆಯಲ್ಲಿ ನೋಡಲಾಗುತ್ತದೆ. ಗಂಡ ಹೆಂಡತಿಯರ ಸಂಬಂಧವನ್ನು ಶಿವ–ಶಕ್ತಿಯ ಸಂಬಂಧಕ್ಕೆ ಹೋಲಿಸುವುದುಂಟು. ***"ನಾಗರಿಕತೆಯ ವ್ಯವಸ್ಥೆಯಲ್ಲಿ ಸಂಸಾರವೇ ಸಮಾಜದ ಮೂಲ ಘಟಕ"*** ಎಂಬುದು ನಾಗರೀಕ ಬದುಕಿನಲ್ಲಿ ಸಂಸಾರದ ಮಹತ್ವವನ್ನು ಸಾರುತ್ತದೆ. ಆರೋಗ್ಯಕರ ಸಾಮಾಜಿಕ ವ್ಯವಸ್ಥೆಗೆ ಅತ್ಯಂತ ಮೌಲ್ಯಯುತವಾದುದು ಉತ್ತಮ ಸಂಬಂಧವುಳ್ಳ ಸಾಂಸಾರಿಕ ಬದುಕು. ಸಮಾಜದಲ್ಲಿ ಸಾಂಸಾರಿಕ ಜೀವನ ಸರಪಳಿಯಂತೆ ಮುಂದುವರೆಯುತ್ತಾ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಸಹಕರಿಸುತ್ತದೆ. ಆಧುನಿಕತೆಯ ವೇಗ ಕುಟುಂಬ ವ್ಯವಸ್ಥೆಯನ್ನು ಅಲುಗಾಡಿಸಿದರೆ ಸಾಮಾಜಿಕ ಸ್ವಾಸ್ಥ್ಯಕ್ಕೆ ಬಿರುಕುಂಟಾಗಿ ಸಂಸ್ಕೃತಿ, ಸಂಪ್ರದಾಯ, ಆಚಾರ, ವಿಚಾರಗಳಿಗೆ ಕೊಡಲಿ ಪೆಟ್ಟು ಬೀಳುವುದು. ಸಮಾಜದ ನೆಮ್ಮದಿಗೆ ಸಂಸಾರವು ಸಹಕರಿಸುತ್ತದೆ ಎಂಬುದಕ್ಕೆ ರಾಮಾಯಣ ಮಹಾಭಾರತಗಳೇ ನಿದರ್ಶನ. ಇದನ್ನೆಲ್ಲ ಗಮನಿಸಿ ನೋಡಿದಾಗ ಅಶ್ವತ್ಥಾಮ ತಳೆದಿರುವ ನಿಲುವುಗಳು ಸಮಾಜಕ್ಕೆ ಮಾರಕವೆ ಆಗಿವೆ.

ಶುಭಾಂಗಿನಿ, ಸರೋಜಿನಿ, ಸಂಯುಕ್ತಾ ಇವರಲ್ಲಿ ಅಶ್ವತ್ಥಾಮನ ಕೊನೆಗಳಿಗೆವರೆಗು ಇರುವವಳು ಸಂಯುಕ್ತಾ ಮಾತ್ರ. ಸಂಯುಕ್ತಾಳ ಮೇಲೆಯೂ ಅವನಿಗಿದ್ದುದು ತಾತ್ಸಾರ ಭಾವವೆ. ***"ನಾನು ಅವಳಿಗಾಗಿ ಕಾಯುತ್ತಿದ್ದೇನೆ ಅಂದು ಕೊಂಡಿದ್ದಾಳೆ, ತಾನು ಬರುವುದು ತಡವಾದರೆ ನನಗೆ ನೋವಾಗುತ್ತದೆ ಅಂತ***

***ಭಾವಿಸಿದ್ದಾಳೆ. ಈ ಹೆಣ್ಣುಗಳ ಗುಣವೆ ಇಂಥದ್ದು"*** ಈ ಮಾತುಗಳು ಸಂಯುಕ್ತಾಳ ಬಗೆಗೆ, ಅಂತೆಯೇ ಹೆಣ್ಣುಗಳ ಬಗೆಗೆ ಅವನಿಗಿದ್ದ ಮನಸ್ಥಿತಿಯನ್ನು ತಿಳಿಸುತ್ತದೆ. ಅವನು ಯಾರಲ್ಲು ಸ್ಥಿರವಾದ ನಂಬಿಕೆ, ವಿಶ್ವಾಸ ಇಡುವುದಿಲ್ಲವೆಂಬುದಕ್ಕೆ ಕೊನೆವರೆಗು ಜೊತೆಯಲ್ಲಿ ಇದ್ದ ಸಂಯುಕ್ತಾಳ ಬಗೆಗೆ ಆಡಿದ ಮಾತುಗಳು ಸಾಕ್ಷಿಯಾಗಿವೆ. ರಾಜೇಂದ್ರನ ತೋಟದಲ್ಲಿ ಇರುವ ಮನೆಗೆ ಸಂಯುಕ್ತಾಳೆ ಅಶ್ವತ್ಥಾಮನನ್ನು ಸೇರಿಸಿದ್ದು. ಆದರೆ ಅವನನ್ನು ನೋಡಲು ಸಂಯುಕ್ತ ಬರದೆ ಇದ್ದಾಗ ಅಶ್ವತ್ಥಾಮನ ಆಲೋಚನೆ ಬದಲಾಗುತ್ತದೆ. ಸಂಯುಕ್ತಾಳ ಮೇಲೆ ತಾತ್ಸಾರದ ಭಾವವನ್ನು ಹೊರ ಹಾಕುತ್ತಾನೆ.

ಸಂಯುಕ್ತಾ ಡಾಕ್ಟರಾಗಿಯೂ ಡಾ. ರಂಗಧಾಮನಿಗೆ ಅಶ್ವತ್ಥಾಮನ ಕಾಯಿಲೆಯನ್ನು ಗುಣಪಡಿಸಲು ಯಾಕೆ ಹೇಳಿದಳು? ಅಶ್ವತ್ಥಾಮನನ್ನು ನೋಡಲು ಬರುತ್ತಿಲ್ಲವೇಕೆ? ರಾಜೇಂದ್ರನ ತೋಟದಲ್ಲಿ ಅಶ್ವತ್ಥಾಮನನ್ನು ಇರಿಸಿದ್ದಳೇಕೆ? ಎಂಬ ಹಲವಾರು ಪ್ರಶ್ನೆಗಳು ಓದುಗರಲ್ಲಿ ಬಂದರೆ ತಪ್ಪಿಲ್ಲ. ಕಾದಂಬರಿಕಾರರು ಅಶ್ವತ್ಥಾಮನ ಒಳ ತಲ್ಲಣಗಳನ್ನು ತೆರೆದು ತೋರುವಲ್ಲಿಯೇ ಹೆಚ್ಚು ಆಸಕ್ತಿ ತೋರಿದ್ದಾರೆ. ಮೇಲ್ಕಂಡ ಪ್ರಶ್ನೆಗಳಿಗೆ ಕಾದಂಬರಿಯಲ್ಲಿ ಉತ್ತರ ಸಿಗದಿದ್ದರೂ ಓದುಗನು ಅವುಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾಗುತ್ತದೆ. ***"ಹೊಸ ಬಗೆಯಲ್ಲಿ ಗ್ರಹಿಸುವುದನ್ನು ಒತ್ತಾಯಿಸುವುದರ ಮುಖಾಂತರ ಕಾದಂಬರಿ ಹೊಸ ನೈತಿಕ ಮೌಲ್ಯಗಳನ್ನು ಸೃಷ್ಟಿ ಮಾಡಬಲ್ಲದು"*** ಆ ಹಿನ್ನೆಲೆಯಲ್ಲಿ ಅಶ್ವತ್ಥಾಮನ್ ಕಾದಂಬರಿ ನೈತಿಕ ಮೌಲ್ಯಗಳ ಬಗೆಗೆ ಓದುಗನಲ್ಲಿ ಆಲೋಚಿಸುವಂತೆ ಮಾಡುತ್ತದೆ.

ಅಶ್ವತ್ಥಾಮನ ಜೀವನದಲ್ಲಿ ಬಂದಂತಹ ವ್ಯಕ್ತಿಗಳು, ಘಟನೆಗಳು ಮತ್ತು ಸಿನಿಮಾಕ್ಷೇತ್ರದಲ್ಲಿ ಆದಂತಹ ಅನುಭವಗಳನ್ನು ಕಾದಂಬರಿಯಲ್ಲಿ ಚಿತ್ರಿಸುತ್ತಾ ಪ್ರಸ್ತುತ ಸಮಾಜದ ಹಲವಾರು ವಿಚಾರಗಳನ್ನು ಕಟ್ಟಿಕೊಡುವಲ್ಲಿ ಕಾದಂಬರಿಕಾರರು ಯಶಸ್ವಿಯಾಗಿದ್ದಾರೆ.

ಯಾವುದೇ ವ್ಯಕ್ತಿಗೆ ಕಾಲ್ಪನಿಕ ಬದುಕಿಗೂ ವಾಸ್ತವ ಬದುಕಿಗೂ ವ್ಯತ್ಯಾಸ ತಿಳಿದಿರಬೇಕು. ಕನಸು ಬದುಕಲ್ಲ. ಬದುಕು ಕನಸಲ್ಲ. ಅಂತೆಯೇ ಬಣ್ಣ ಹಚ್ಚಿ ಪಾತ್ರ ಮಾಡುತ್ತೇವೆಂದ ಮಾತ್ರಕ್ಕೆ ನಾವೇ ರಾಮ, ಭೀಮ, ದುರ್ಯೋಧನ, ದುಶ್ಯಾಸನ ಆಗುವುದಿಲ್ಲ. ಆಗಲೂ ಬಾರದು. ಪಾತ್ರ ಆಡಿ ಮುಗಿದಾಗ ಅದರಿಂದ ಹೊರಬಂದು ನಿಜ ಬದುಕಿನ ವಾಸ್ತವತೆ ಅರಿತು ಬದುಕಬೇಕು. ನಟನೆಯಲ್ಲಿ ಪರಕಾಯ ಪ್ರವೇಶ ಎಂಬುದೊಂದಿದೆ. ತನ್ನನ್ನು ತಾನು ಪಾತ್ರದ ಜೊತೆ ಸಂಪೂರ್ಣವಾಗಿ ವಿಲೀನಗೊಳಿಸಿಕೊಳ್ಳುವುದು. ಒಂದು ಪಾತ್ರ ಮಾಡುವಾಗ ಪಾತ್ರದ ಆಲೋಚನೆಯನ್ನೆಲ್ಲ ತನ್ನವೆ ಎಂಬಂತೆ ಭಾವಿಸುವುದು ಕೂಡ. ಆದರೆ ಆ ಪರಕಾಯ ಪ್ರವೇಶ ನಾಟಕದ ಅವಧಿಗಷ್ಟೇ ಸೀಮಿತಗೊಳ್ಳಬೇಕು.

ಮನುಷ್ಯರಲ್ಲಿ ಇರುವ ಸುಪ್ತಚೇತನ ಅವನ ಜೀವನದಲ್ಲಿ ನಡೆದ ಹಲವಾರು ಘಟನೆಗಳನ್ನು ತನ್ನಲ್ಲಿ ಬಚ್ಚಿಟ್ಟುಕೊಂಡಿರುತ್ತದೆ. ಸಮಯ ಬಂದಾಗ ಸುಪ್ತಚೇತನದಲ್ಲಿರುವ ಅನೇಕ ಸನ್ನಿವೇಶ, ಆಲೋಚನೆ ಮುಂತಾದ ಅನೇಕ ಅಂಶಗಳು ಸಂದರ್ಭಕ್ಕನುಗುಣವಾಗಿ ಹೊರಬರುತ್ತವೆ. ಅದನ್ನು ಸರಿದೂಗಿಸಲು ಆತನ ಜಾಗೃತ ಪ್ರಜ್ಞೆ ಸದಾ ಜಾಗರೂಕವಾಗಿರಬೇಕು. ಇಲ್ಲವಾದರೆ ಅವನ ವಾಸ್ತವ ಜೀವನ ಕಷ್ಟವಾಗುತ್ತದೆ. ಅಶ್ವತ್ಥಾಮನ ಸ್ಥಿತಿ ಇದೆ ಆಗಿದೆ. ಆತನು ಮಾಡುವ ಪಾತ್ರಗಳ ಜೊತೆಯೇ ಜೀವಿಸುವವನಾಗಿ ಸಂಪೂರ್ಣ ನಟನೆಯ ಭ್ರಮೆಯಲ್ಲಿರುತ್ತಾನೆ. ಅಶ್ವತ್ಥಾಮ ಶ್ರೇಷ್ಠ ನಟನಕಾರನಾದರೂ ಪಾತ್ರಗಳಿಂದ ಹೊರಬರದವನಾಗಿರುತ್ತಾನೆ. ಅವನ ಮನಸ್ಸು ಸದಾ ಪಾತ್ರಗಳಂತೆಯೆ ಚಿಂತಿಸುತ್ತದೆ. ಕವಿ ಪಾತ್ರ ಸಿಕ್ಕಾಗ

ಕವಿಯ ಆಲೋಚನೆ, ಸಾಮಾನ್ಯ ಜನರ ಪಾತ್ರ ಸಿಕ್ಕಾಗ ಅದೆ ರೀತಿ ಕಳ್ಳ, ಕುಡುಕ, ಅತ್ಯಾಚಾರಿ, ಮೋಸಗಾರ ಇವೆ ಮುಂತಾದ ಯಾವುದೇ ಪಾತ್ರಗಳು ಸಿಕ್ಕರೂ ಸಂಪೂರ್ಣವಾಗಿ ಅವುಗಳಲ್ಲಿ ಅವನು ತೊಡಗಿಸಿಕೊಳ್ಳುತ್ತಾನೆ. ಪರಕಾಯ ಪ್ರವೇಶ ಮಾಡಿ ತಾನು ಯಾರು ಎಂಬುದನ್ನು ಮರೆತೇ ಹೋಗುತ್ತಾನೆ. ಇದು ಆತನ ದೌರ್ಬಲ್ಯವಾಗಿದೆ. ಆ ದೌರ್ಬಲ್ಯ ಕೊನೆಗೆ ಆತನನ್ನು ನಾಶ ಮಾಡುತ್ತದೆ.

ಅಶ್ವತ್ಥಾಮನ್ ಪಾತ್ರದ ಮೂಲಕ ಮಾನವ ಜೀವನದ ವಿವಿಧ ಬಗೆಯ ತಲ್ಲಣಗಳನ್ನು ಈ ಕಾದಂಬರಿ ತಿಳಿಸಿಕೊಟ್ಟಿದೆ. ಪ್ರೀತಿ, ದ್ವೇಷ, ಅಸಹನೆ, ಕಾಮ ಹೀಗೆ ಅನೇಕ ವಿಚಾರಗಳು ಈ ಕಾದಂಬರಿಯ ಮುಖ್ಯ ವೇದಿಕೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ.

ಅಶ್ವತ್ಥಾಮನಿಗೆ ಮದುವೆ ಎಂಬುದು ಒಂದು ನರಕ ಎಂಬಂತೆ ಭಾಸವಾಗಿದೆ. ಹಾಗಾಗಿಯೇ ***"ಮದುವೆ ಅನ್ನುವುದೇ ಒಂದು ವಾಸಿಯಾಗದ ಹುಣ್ಣು"***[10] ಎಂಬ ಆತನ ಮಾತು ಮದುವೆ ಬಗೆಗೆ ತಳೆದಿರುವ ನಿಲುವನ್ನು ತಿಳಿಸುತ್ತದೆ. ಆದರೆ ಆ ಹುಣ್ಣನ್ನು ಅಪ್ಯಾಯಮಾನವಾಗಿ ಮಾಡಿಕೊಂಡಿದ್ದಾನೆ. ಆ ಕಾಯಿಲೆಯನ್ನು ಮೈಗತ್ತಿಸಿಕೊಂಡು ನರಳುತ್ತಾನೆ. ಅನುಭವಿಸುತ್ತಾ ಹೋಗುತ್ತಾನೆ. ಬಹುಶಃ ಶುಭಾಂಗಿನಿ, ಸರೋಜಿನಿ ಮತ್ತು ಸಂಯುಕ್ತಾ ಆ ಹುಣ್ಣಿನ ವಿವಿಧ ಹಂತಗಳೆಂದರೂ ತಪ್ಪಿಲ್ಲ. ಕೊನೆಗೆ ಅಶ್ವತ್ಥಾಮ ತನ್ನ ಜೀವನದಲ್ಲಿ ಬಂದು ಹೋಗಿರುವ ಶುಭಾಂಗಿನಿ, ಸರೋಜಿನಿ ಮತ್ತು ಸಂಯುಕ್ತಾಳನ್ನು ನೆನೆದು ಕೊರಗುತ್ತಾ ಮತ್ತೊಬ್ಬ ಹೆಣ್ಣು ತನ್ನ ಜೀವನದಲ್ಲಿ ಬರಲಿ ಎಂದು ಕಾಯುವವನಾಗುವುದು ಇದೇ ಮನೋಭಾವದಿಂದ.

ಭಾರತೀಯ ಸಂಸ್ಕೃತಿಯಲ್ಲಿ ಮದುವೆಗೆ ಅಪಾರವಾದ ಮೌಲ್ಯವಿದೆ. ಗಂಡ–ಹೆಂಡತಿ ಎಂಬ ಸಂಬಂಧವು ಶಿವ–ಶಕ್ತಿ, ಪುರುಷ–ಪ್ರಕೃತಿ ಸಂಬಂಧ ಎಂದು ಭಾವಿಸುವ ಸಂಸ್ಕೃತಿ ನಮ್ಮದು. ಜನಪದ ಸಾಹಿತ್ಯವನ್ನು ಅವಲೋಕಿಸಿದಾಗ ಆ ಸಂಬಂಧದ ಬೆಲೆ ತಿಳಿಯುತ್ತದೆ. ***"ಹೆಣ್ಣು ಮಕ್ಕಳ ಕಳುಹಿ ಕಣ್ಣು ನೀರು ತಂದು, ಸಣ್ಣ ಶಲ್ಯದಲಿ ಮುಸುಕ್ಯಾಕೆ – ಹಡೆದಪ್ಪ, ಹೆಣ್ಣು ಸಾಕೆಂದ ಜನುಮಾಕೆ"***[11] ಈ ಮಾತಿನಲ್ಲಿ ಹೆಣ್ಣು ಮಕ್ಕಳ ಬಗೆಗಿನ ಕಾಳಜಿ, ಬದುಕಿನ ಅಭದ್ರತೆ, ಪುರುಷ ಸಮಾಜದಿಂದ ಎದುರಿಸಬೇಕಾಗಿರುವ ಸವಾಲುಗಳು, ಅವುಗಳನ್ನು ಹೆಣ್ಣಾಗಿ ನಿಭಾಯಿಸಬೇಕಾದ ಸಂದರ್ಭಗಳು ಇತ್ಯಾದಿಗಳೆಲ್ಲಾ ಇಲ್ಲಿ ಧ್ವನಿತವಾಗಿವೆ. ಆದರೆ ಆಧುನಿಕ ಬದುಕಿನ, ಪಾಶ್ಚಾತ್ಯ ಸಂಸ್ಕೃತಿಯ ಸೆಳೆತಕ್ಕೆ ಒಳಗಾಗಿರುವ ನಾವು ಹಿಂದೆಂದಿಗಿಂತಲೂ ಇಂದು ಹೆಣ್ಣನ್ನು ಭೋಗದ ವಸ್ತುವಾಗಿ ಕಾಣುತಿದ್ದೇವೆ. ಅದಕ್ಕೆ ಅತ್ಯುತ್ತಮ ಉದಾಹರಣೆ ಅಶ್ವತ್ಥಾಮನ್ ಕಾದಂಬರಿ. ಕೇವಲ ಅಶ್ವತ್ಥಾಮನ್ ನೆಲೆಯಿಂದ ಮಾತ್ರವಲ್ಲದೆ ಮೂವರು ಹೆಣ್ಣುಮಕ್ಕಳ ನೆಲೆಯಿಂದಲೂ ಕಾದಂಬರಿಯನ್ನು ಅವಲೋಕಿಸಬಹುದಾಗಿದೆ.

**ಕೊನೆ ಟಿಪ್ಪಣಿಗಳು.**

1. ಜೋಗಿ. (2020). ಅಶ್ವತ್ಥಾಮನ್. ಪು.ಸಂ. 9
2. ಕಾಳೇಗೌಡ ನಾಗವಾರ. (1988). ಪ್ರೀತಿ ಮತ್ತು ನಿರ್ಭೀತಿ. ಪು.ಸಂ. 59
3. ಜೋಗಿ. (2020). ಪೂರ್ವೋಕ್ತ. ಪು.ಸಂ. 35
4. ಅದೇ. ಪು.ಸಂ. 48

5. ನರಹಳ್ಳಿ ಬಾಲಸುಬ್ರಹ್ಮಣ್ಯ. (2004). ಕುವೆಂಪು ಕಾವ್ಯ ಸಂಸ್ಕೃತಿ ಚರಿತ್ರೆಯ ರೂಪಕ. ಪು.ಸಂ. 10
6. ಜೋಗಿ. (2020). ಪೂರ್ವೋಕ್ತ. ಪು.ಸಂ. 111
7. ಜವರೇಗೌಡ ದೇ. (2012). ಕನ್ನಡ ಸಂಸ್ಕೃತಿ. ಪು.ಸಂ. 12
8. ಜೋಗಿ. (2020). ಪೂರ್ವೋಕ್ತ. ಪು.ಸಂ. 95
9. ಅನಂತಮೂರ್ತಿ. ಯು.ಆರ್. (1992). ಸಮಕ್ಷಮ. ಪು.ಸಂ. 171
10. ಜೋಗಿ. (2020). ಪೂರ್ವೋಕ್ತ. ಪು.ಸಂ. 141
11. ಜವರೇಗೌಡ ದೇ. (2012). ಪೂರ್ವೋಕ್ತ. ಪು.ಸಂ. 15

**ಪರಾಮರ್ಶನ ಗ್ರಂಥಗಳು**


- ಅನಂತಮೂರ್ತಿ. ಯು.ಆರ್. (1992). ಸಮಕ್ಷಮ. ಅಕ್ಷರ ಪ್ರಕಾಶನ, ಹೆಗ್ಗೋಡು. ಪು.ಸಂ. 171.
- ಕಾಳೇಗೌಡ ನಾಗವಾರ. (1988). ಪ್ರೀತಿ ಮತ್ತು ನಿರ್ಭೀತಿ. ರಶ್ಮಿ ಉದ್ಯಮ ಕೇಂದ್ರ, ಮೈಸೂರು. ಪು.ಸಂ. 59.
- ಕೀರ್ತಿನಾಥ ಕುರ್ತಕೋಟಿ. (2021). ಯುಗಧರ್ಮ ಹಾಗು ಸಾಹಿತ್ಯ ದರ್ಶನ. ಮನೋಹರ ಗ್ರಂಥಮಾಲ, ಧಾರವಾಡ.
- ಗಿರಡ್ಡಿ ಗೋವಿಂದರಾಜ. (2016). ಸಮಗ್ರ ವಿಮರ್ಶೆ. ಸಪ್ನ ಬುಕ್ ಹೌಸ್, ಬೆಂಗಳೂರು.
- ಗೌರಿಶಂಕರ್. (2015). ಅನಕೃ ಕಾದಂಬರಿಗಳ ಕುರಿತು. ಸುಂದರ ಪ್ರಕಾಶನ.
- ಜವರೇಗೌಡ ದೇ. (2012). ಕನ್ನಡ ಸಂಸ್ಕೃತಿ. ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು.
- ಜೋಗಿ. (2020). ಅಶ್ವತ್ಥಾಮನ್. ಮೈಲ್ಯಾಂಡ್ ಬುಕ್ಸ್ ಡಿಜಿಟಲ್ ಪ್ರೈ.ಲಿ, ಬೆಂಗಳೂರು.
- ನರಹಳ್ಳಿ ಬಾಲಸುಬ್ರಹ್ಮಣ್ಯ. (2004). ಕುವೆಂಪು ಕಾವ್ಯ ಸಂಸ್ಕೃತಿ ಚರಿತ್ರೆಯ ರೂಪಕ. ಅಂಕಿತ ಪ್ರಕಾಶನ, ಬೆಂಗಳೂರು. ಪು.ಸಂ. 10.
- ಶೇಷಗಿರಿರಾವ್. ಎಲ್.ಎಸ್. ಹೊಸಗನ್ನಡ ಸಾಹಿತ್ಯ ಚರಿತ್ರೆ. ಅಂಕಿತ ಪುಸ್ತಕ, ಬೆಂಗಳೂರು.